

ಶಾಲೆಯಿಂದ ಬಂದ ತಕ್ಷಣ ಕುಂಟೋಬಿಲ್ಲೆ ಆಡುತ್ತಿದ್ದೆ. ಆ ಆಟಕ್ಕೆ ಗಂಡು–ಹೆಣ್ಣೆಂಬ ಭೇದಭಾವ ಇಲ್ಲ. ಒಟ್ಟಿಗೆ ಆಟ ಆಡುತ್ತಿದ್ದೆವು. ನನ್ನ ತುಂಬಾ ಇಷ್ಟದ ಆಟ ಕುಂಟೋಬಿಲ್ಲೆ. ಒಂದುದಿನ ಹೀಗೆ ಸ್ನೇಹಿತರ ಜೊತೆ ಆಡುವಾಗ, ಇದ್ದಕ್ಕಿದ್ದಂತೆ ನೆಲದ ಮೇಲೆ ರಕ್ತ ಕಾಣಿಸಿಕೊಂಡಿತು. ಅದು ಎಲ್ಲರ ಕಣ್ಣಿಗೂ ಕಂಡಿತು. ಮೊದಲನೇ ಸಲ ನನಗೆ ಭಯವೆನಿಸಿತು.

ನನ್ನ ಒಳ ಉಡುಪಲ್ಲೂ ಏನೋ ಒಂದು ರೀತಿಯ ಒದ್ದೆ ಒದ್ದೆ ರೀತಿಯ ಭಾವನೆ. ಅಸಹ್ಯ ಅನಿಸುತ್ತಿದೆ. ನಾನು ಸತ್ತು ಹೋಗುತ್ತೇನೆ ಎನ್ನಿಸಿತು. ಆ ಭಯ ಹೆಚ್ಚಾಗಿ, ಜೋರಾಗಿ ಅಳುವುದಕ್ಕೆ ಶುರುಮಾಡಿದೆ. ಎದ್ದೇಳಲು ಆಗದಿದ್ದಾಗ, ಅಲ್ಲಿರುವ ಗೆಳತಿಯರ ಸಹಾಯದಿಂದ ಹೇಗೋ ಮನೆ ತಲುಪಿದೆ. ಮನದೊಳಗೆ ಸಾವಿರಾರು ಪ್ರಶ್ನೆಗಳು. ಎಲ್ಲಿಂದ ರಕ್ತ ಬರುತ್ತಿದೆ? ಅಲ್ಲಿಗೆ ಕಲ್ಲೇನಾದರೂ ತಾಗಿದೆಯಾ? ಹೇಗೆ ತೋರಿಸೋದು? ಯಾರಿಗೆ ಹೇಳೋದು? ಸಾವಿರ ಸಾವಿರ ಪ್ರಶ್ನೆಗಳು. ಈ ಪ್ರಶ್ನೆಗಳ ನಡುವೆಯೂ, ‘ಶ್! ಮೆಲ್ಲಗೆ. ಯಾರಿಗೂ ಹೇಳಬೇಡಿ’ ಎಂದು ಗೆಳತಿಯರಿಗೆ ಹೇಳಿದ್ದಾಯಿತು.

ಮನೆಗೆ ಹೋದ ತಕ್ಷಣ ಗೊಳೋ ಎಂದು ಅಳೋಕೆ ಶುರು ಮಾಡಿದೆ. ನಾನಿನ್ನು ಬದುಕೊಲ್ಲ ಅಂತ ಅಮ್ಮಂಗೆ ಹೆಂಗೆ ಹೇಳಲಿ. ಹೇಳಿದರೆ ಅಮ್ಮ ಎಲ್ಲರಿಗೂ ಹೇಳಬಿಡ್ತಾರೆ, ಆಗ ಎಲ್ಲರೂ ಬಂದುಬಿಡುತ್ತಾರೆ. ಬಂದು ಬೈತಾರೆ. ಏನು ಮಾಡೋದು – ಹೀಗೆ ಯೋಚಿಸುತ್ತಿರುವಾಗಲೇ, ಅಮ್ಮ ಓಡೋಡಿ ಬಂದು ಒಂದೇ ಸಮನೇ ಹೇಳಲು ಶುರು ಮಾಡಿದಳು: ಎದ್ದೇಳು ಇಲ್ಲಿ ಕೂತ್ಕೋಬಾರದು? ಹೇ... ಅದೆಲ್ಲ ನೀನು ಮುಟ್ಟಬಾರದು?

ನನ್ನ ತೊಂದರೆಯ ಕುರಿತು ಅಮ್ಮನಿಗೆ ಯಾರಾದರೂ ಹೇಳಿದರಾ? ಗಾಬರಿಯಿಂದ ಸುತ್ತಮುತ್ತ ನೋಡುವಾಗ ಮತ್ತೆ ಅಮ್ಮನ ಮಾತು ಹಿಂಬಾಲಿಸಿತು: ‘ಹೇ... ಹಂಗೆಲ್ಲಾ ಯಾರನ್ನು ನೋಡಬಾರದು’.

ಅಮ್ಮ ಒಂಡು ಕೈಯಲ್ಲಿ ನನ್ನ ಮುಖಮುಚ್ಚಿಕೊಂಡು, ಇನ್ನೊಂದು ಕೈಯಲ್ಲಿ ಎಳಕೊಂಡು ಹೋಗಿ ಒಂದು ಮೂಲೆಯಲ್ಲಿ ಕೂರಿಸಿ ಮತ್ತೊಮ್ಮ ಗಟ್ಟಿಯಾಗಿ ಹೇಳಿದಳು: ‘ಅಡುಗೆ ಮನೆ, ದೇವರ ಮನೆಗೆ ಹೋಗಬಾರದು. ಗಂಡಸರ ಜೊತೆ ಆಟ ಆಡೋದು, ಮಾತಾಡೋದು ಹೊರಗೆ ಓಡಾಡೋದು ಇದೆಲ್ಲಾ ಮಾಡುವ ಹಾಗಿಲ್ಲ. ದೇವರು ಶಾಪ ಕೊಡುತ್ತಾನೆ. ದೆವ್ವ ಮೈಯಲ್ಲಿ ಸೇರಿಕೊಳ್ಳುತ್ತೆ’.

ನನ್ನ ಮನಸ್ಸಿನಲ್ಲಿ ಬಲವಾಗಿ ಪ್ರಶ್ನೆಯೊಂದು ಕಾಡತೊಡಗಿತು: ನಾನು ಸತ್ತು ಹೋಗುವುದರಿಂದ ಇಲ್ಲಿ ಕೂತುಕೊಳ್ಳಬೇಕಾ? ಗೊಂದಲದ ನಡುವೆಯೇ ಹೊಟ್ಟೆನೋವು, ಸೊಂಟನೋವು. ಯಾಕೆ ಹೀಗಾಗ್ತಿದೆ ಅಂತ ಗೊತ್ತಾಗ್ತಿಲ್ಲ, ಯಾರೂ ಹೇಳುತ್ತಿಲ್ಲ. ಅಮ್ಮ ನೋಡಿದರೆ ಅಳುತ್ತಾ ಅಪ್ಪಂಗೆ ಫೋನ್ ಮಾಡಿ – ‘ಇವಳು ಈಗಲೇ ಆಗಬೇಕಿತ್ತಾ? ದರಿದ್ರ ಮನೆಯಲ್ಲಿ ಈಗಿರುವ ಕಷ್ಟ ಸಾಕಾಗಿದೆ. ಈಗ ಇವಳನ್ನು ಹೇಗೆ ನೋಡಿಕೊಳ್ಳೋದು? ಮುಂದಿನ ವರ್ಷ ಆಗಬಾರದಿತ್ತಾ?’. ಮೊದಲನೇ ಸಲ ನನಗೆ ಅಸಹ್ಯ ಅನಿಸಿತು ನನ್ನ ದೇಹದ ಬಗ್ಗೆ. ಆ ರಕ್ತ ನೋಡಿ ನಾಚಿಕೆ ಆಯಿತು. ಮೂಲೆಯಲ್ಲಿ ಕೂತುಕೊಳ್ಳೋಕೆ ಅವಮಾನ ಅನಿಸಿತು. ನನಗೇ ಅಂತ ಪ್ರತ್ಯೇಕವಾಗಿ ತಟ್ಟೆ–ಲೋಟ, ಹಾಸಿಗೆ ಬೇರೆ ಬೇರೆ ಮಾಡಿದ್ದಕ್ಕೆ ಸ್ವಾತಂತ್ರ್ಯವೇ ಕಳೆದುಹೋಯಿತು. ಇದರ ನಡುವೆ ಮನೆಗೆ ಬಂದವರೆಲ್ಲ, ‘ಪಾಪ, ಇವಾಗಲೇ ಆಗಬಾರದಿತ್ತು. ಇನ್ನೂ ಸಣ್ಣ ಹುಡುಗಿ, ಹೆಂಗೆ ನಿಭಾಯಿಸ್ತಾಳೋ’ ಅಂತ ಹೇಳಿ ಹೋಗುವಾಗ ನಾನು ಸತ್ತು ಹೋಗೋದು ಕಾಯಂ ಅಂತ ಸ್ಪಷ್ಟವಾಗುತ್ತಾ ಹೋಯಿತು. ಅಂದಿನಿಂದಲೇ ನನ್ನ ದೇಹದ ಬಗ್ಗೆ ನನಗೆ ಕೀಳರಿಮೆ ಹುಟ್ಟಿತು.

***

ಅಂದಿನ ಆ ದಿನಗಳನ್ನು ಈಗ ನೆನಪಿಸಿಕೊಂಡರೆ, ನಗು ಹಾಗೂ ಆಶ್ಚರ್ಯ ಒಟ್ಟಿಗೆ ಆಗುತ್ತೆ. ನಗು ಯಾಕೆಂದರೆ, ನಾನಿನ್ನೂ ಸತ್ತಿಲ್ಲ. ಆಶ್ಚರ್ಯಕ್ಕೆ ಕಾರಣ, ಮುಟ್ಟಿನ ವಿಷಯವನ್ನು ಯಾಕೆ ಅಷ್ಟೊಂದು ಗುಟ್ಟಾಗಿ ಇಟ್ಟರು? ಆ ವಿಷಯದ ಬಗ್ಗೆ ಇವತ್ತಿಗೂ ಮುಕ್ತವಾಗಿ ಮಾತನಾಡಲು ಯಾಕೆ ಸಾಧ್ಯವಾಗುತ್ತಲೇ ಇಲ್ಲ?

ಮನೆಯಲ್ಲಿರುವ ಗಂಡಸರು ಮುಟ್ಟಿನ ಬಗ್ಗೆ ಯಾಕೆ ಮಾತಾಡೊಲ್ಲ ಅಂತ ಯಾರೂ ಕೇಳುತ್ತಿಲ್ಲ? ಅವರಿಗೂ ತಿಳಿದುಕೊಳ್ಳಬೇಕೆಂಬ ಕುತೂಹಲ ಇರೋದಿಲ್ವ! ಹೆಣ್ಣುಮಕ್ಕಳ ಬಗ್ಗೆ ಪ್ರೀತಿ ಕಾಳಜಿ ಇರುವವರಿಗೆ ಇದರ ಬಗ್ಗೆ ತಿಳಿದುಕೊಳ್ಳಬೇಕೆಂಬ ಅಭಿಪ್ರಾಯ ಹುಟ್ಟಲಿಲ್ಲವೆ? ಅಥವಾ ಇಂತಹ ಅವಕಾಶ ಈ ವ್ಯವಸ್ಥೆಯಲ್ಲಿ ಇಲ್ವಾ? ಹಾಗಾದರೆ ಯಾರು ಇದನ್ನೆಲ್ಲಾ ಮಾಡಿದರು, ಹೇಳಿದರು ಎಂದು ಹುಡುಕುತ್ತಾ ಹೋದಾಗ ಅನ್ನಿಸುವುದು: ನಾವು ಯಾವುದನ್ನೂ ಮರು ಪ್ರಶ್ನೆ ಮಾಡಿಲ್ಲ. ಹಾಗೇನೆ ಯಾವುದೇ ವಿಚಾರವನ್ನು ಪಾಲಿಸುವುದಕ್ಕೆ ಮುಂಚೆ ಅದನ್ನು ಯಾಕೆ ಮಾಡಿರಬಹುದು? ಯಾರು ಹೇಳಿರಬಹುದು? ಯಾವ ಕಾರಣಕ್ಕಾಗಿ ಹೇಳಿರಬಹುದು ಎಂದು ನಾವು ನಮ್ಮನ್ನ ಪ್ರಶ್ನೆ ಮಾಡಿಕೊಂಡಿದ್ದರೆ ಸಾಕಿತ್ತೇನೋ. ಆಗ ಇಷ್ಟೊಂದು ನಂಬಿಕೆಗಳು, ಮೌಢ್ಯಗಳು ಇರುತ್ತಿರಲಿಲ್ಲವೇನೋ?

‘ಮುಟ್ಟು’ ಎಂಬ ಹೆಸರನ್ನು ಯಾರು ಇಟ್ಟಿರಬಹುದು? ಯಾಕೆ ಈ ಹೆಸರನ್ನೇ ಇಟ್ಟಿರಬಹುದು? ಕಾರಣ ಏನಾದರೂ ಇತ್ತಾ? ಹೌದು, ಈ ಹೆಸರಿನವರು ಯಾರಾದರೂ ಇದ್ದರಾ? ಯಾಕೆಂದರೆ ಎಲ್ಲಾ ದೇವರ ಹೆಸರುಗಳಿಗೆ ಒಂದೊಂದು ಕಥೆ ಇದೆ ಹಾಗೆಯೇ ಈ ಮುಟ್ಟಿನ ಹೆಸರಿನ ಹಿಂದೆ ಏನಾದರು ಕಥೆ ಇರಬಹುದಾ? ನಾನು ಚಿಕ್ಕವಳಿರುವಾಗ ಅನೇಕ ಸಲ ಇಂತಹ ಪ್ರಶ್ನೆಗಳು ಕಾಡಿದ್ದು ನಿಜ. ಆದರೆ ಈ ಪ್ರಶ್ನೆಗಳನ್ನು ಯಾರಲ್ಲಾದರೂ ಕೇಳಲು ಭಯ.

ನಮ್ಮ ಮನೆಯ ಪಕ್ಕ ಒಂದು ದೊಡ್ಡ ಆಲದ ಮರವಿತ್ತು. ಅಲ್ಲಿ ಬಂದು ಎಲ್ಲಾ ಹೆಣ್ಣುಮಕ್ಕಳು ಕೌದಿ ಹೊಲಿಯುತ್ತಾ ಮಾತಾಡಿಕೊಳ್ಳುತ್ತಿದ್ದರು. ಮುಟ್ಟು ಎನ್ನೋದು ದೇವರು ಶಾಪ ಕೊಟ್ಟಿದ್ದಂತೆ ಎಂದು ಒಬ್ಬರೆಂದರೆ, ಮತ್ತೊಬ್ಬರು ‘ಇದರ ಬಗ್ಗೆ